ಆನಂದಿಸುತ್ತಿದ್ದರು ತಿರುಮಲೇಶರು. ಅಲ್ಲಿ ಉಪದೇಶದ ಮಾತೆಂಬುದು ಲವಲೇಶ ಕಾಣಿಸುತ್ತಿರಲಿಲ್ಲ. ಹತ್ತನೇ ತರಗತಿ ರಜೆಯಲ್ಲಿ ಅವನು ಆಂಗ್ಲ ಭಾಷೆಯಲ್ಲಿ ಒಂದು ನೂರು ಪುಟಗಳಷ್ಟು ಬರವಣಿಗೆ ಮಾಡಿದ್ದ. ಆ ಬರಹವನ್ನು ಓದಿ ಬಹಳ ಮೆಚ್ಚಿಕೊಂಡಿದ್ದರು. 'ಆದರೆ, ನಾವು ಕನ್ನಡದಲ್ಲಿ ಬರೆಯಬೇಕು. ಯಾಕೆ ಹೇಳಿದೆನೆಂಬುದು ಮುಂದೆ ನಿನಗೇ ತಿಳಿಯುತ್ತದೆ' ಎಂದಿದ್ದರು. ಮೊನ್ನೆ ತಿರುಮಲೇಶರು ಇನ್ನಿಲ್ಲ ಎಂದಾಗ ಅದನ್ನೆಲ್ಲ ನೆನಪು ಮಾಡಿಕೊಂಡ ಮಗ, 'ಅವರು ಕನ್ನಡದಲ್ಲಿ ಬರೆಯಬೇಕು ಅಂದಿದ್ದೇಕೆ ಎಂಬುದು ನನಗೀಗ ಅರ್ಥವಾಗಿದೆ' ಅಂದ.

ಒಂದು ಸಲ, ತಿರುಮಲೇಶರೊಂದಿಗೆ ತೇಜಸ್ವಿ ವ್ಯಾಸರು (ಕಥೆಗಾರ ಎಂ. ವ್ಯಾಸರ ಮಗ) ಹಾಗೂ ಮರಕ್ಕಿಣಿ ನಾರಾಯಣ ಮೂರ್ತಿ ನಮ್ಮ ಮನೆಯಲ್ಲಿ ಜೊತೆಗೂಡಿದ್ದರು. ಊಟದ ಮೊದಲೂ ಮಾತು. ನಂತರವೂ ಮಾತು. ನಾವು ನಾಲ್ಕೈದು ಜನ ಸೇರಿಕೊಂಡು ಬಹಳ ಕಾಡಿಸಿರಬೇಕು. ತನ್ನ ಮುಂದೆ ಮಕ್ಕಳು ಕುಳಿತು ಮಾತಾಡುವುದನ್ನು ಕವಿ ಬಹಳ ಉಲ್ಲಾಸದಿಂದ ಆಸ್ವಾದಿಸುತ್ತಿದ್ದರು. ತೇಜಸ್ವಿ ವ್ಯಾಸರಂತೂ 'ತಿರುಮಲೇಶರ ಕೈ ಹಿಡಿದು ನಡೆಯುತ್ತಿದ್ದ ಮಗು ತಾನು' ಎಂದು 'ಅರ್ಧ ಕಥಾನಕ'ದಲ್ಲಿ ದಾಖಲಿಸಿದ್ದಾರೆ. ಅವರ ಕವಿತೆಗಳ ಆರಾಧಕ ತಾನೆಂದು ಅವರೇ ಹೇಳಿಕೊಳ್ಳುತ್ತಾರೆ. ಅವರು ತಿರುಮಲೇಶರ ಕವಿತೆಗಳ ಬಗ್ಗೆ ಮಾತಾಡುವುದನ್ನು ಕೇಳಿದರೇ ಸಾಕು ಅವರೆಷ್ಟು ಶ್ರದ್ಧೆಯಿಂದ ತಿರುಮಲೇಶರ ಕವಿತೆಗಳನ್ನು ಓದುತ್ತಾರೆಂದು ಅರ್ಥವಾಗಿಬಿಡುತ್ತದೆ. ಆ ದಿನದ ಪುಟ್ಟ ಸಂವಾದವನ್ನು ಮುಂದಿನ ದಿನಗಳಲ್ಲಿ ಪ್ರತಿ ಮಾತುಕತೆಯಲ್ಲೂ ತಿರುಮಲೇಶರು ನೆನಪಿಸಿಕೊಳ್ಳುತ್ತಿದ್ದರು. ಬೃಹತ್ ಜನಸ್ತೋಮದ ಮುಂದೆ ವೇದಿಕೆಯ ಭಾಷಣ ಇಷ್ಟವಾಗುವುದಿಲ್ಲವೆಂದು ಸಾರಾಸಗಾಟಾಗಿ ಹೇಳುವುದು ಮಾತ್ರವಲ್ಲ, ಅವರನ್ನು ಭಾಷಣಕ್ಕೆ ಒಪ್ಪಿಸಲೂ ಸಾಧ್ಯವಾಗುತ್ತಿರಲಿಲ್ಲ. ಅದು ಬೇಡವೇ ಬೇಡ ಅನ್ನುತ್ತಿದ್ದ ಕವಿಟ, ಶಾಲೆಗಳಲ್ಲಿ ಮಕ್ಕಳ ಜೊತೆ ಸಂವಾದ ನಡೆಸಲು ಉತ್ಸುಕರಾಗಿರುತ್ತಿದ್ದರು. ಹಂಚಿನ ಮಾಡು, ಮೈದಾನವಿರುವ ಶಾಲೆಗಳನ್ನು ಬಹಳ ಇಷ್ಟಪಡುತ್ತಿದ್ದರು. ಅವರು ಊರಿಗೆ ಬಂದಿದ್ದಾಗ ಕಾಸರಗೋಡು ಜಿಲ್ಲಾ ಲೇಖಕರ ಸಂಘದಿಂದ ಕಳತ್ತೂರು ಶಾಲೆಯಲ್ಲಿ ಮಕ್ಕಳ ಜೊತೆ ಒಂದು ಸಂವಾದ ಇಟ್ಟುಕೊಳ್ಳಲಾಗಿತ್ತು. ಶಾಲೆಯ ಅಂಗಳದಲ್ಲಿರುವ ದಾಸವಾಳದ ಬಣ್ಣದ ಬಗ್ಗೆ ಮಕ್ಕಳನ್ನು ಮಾತಾಡಿಸುತ್ತ ಮಾತು ಸುರು ಮಾಡಿ, ಮಕ್ಕಳಿಗೂ ಅರಿವಾಗದಂತೆ ಮಾತಿನಲ್ಲಿ ತೊಡಗಿಸಿ ಉಲ್ಲಾಸದಿಂದ ನಗುತ್ತಿದ್ದರು. ಮಕ್ಕಳ, ಯುವ ಮನಸುಗಳ ಜೊತೆ ಮಾತುಕತೆ ಅಂದರೆ ಬಹಳ ಹುರುಪಿನಿಂದ ಆಲಿಸುತ್ತಿದ್ದರು.

...ಆ ಸಾರಿ ಅವರು ಊರಿಗೆ ಬಂದ ಸಮಯದಲ್ಲಿ 'ಕಲಿಗುಲ' ನಾಟಕ ಬರೆಯುವ ಸಿದ್ಧತೆಯಲ್ಲಿದ್ದರು. ನಾಟಕದ ಬಗ್ಗೆ ಮಾತಾಡುತ್ತ ಮಾತು ಹೊರಳಿದ್ದು ಕಲಿಗುಲನ ವ್ಯಕ್ತಿತ್ವದ ಬಗ್ಗೆ. ಅಲ್ಲಿಂದ ನಮ್ಮ ನಮ್ಮ ಕೆಟ್ಟತನಗಳಿಗೆ, ದುರ್ವರ್ತನೆಗಳಿಗೆ ಇನ್ನೊಬ್ಬರನ್ನೇ ಹೊಣೆಯಾಗಿಸುತ್ತಿದ್ದರೆ ನಮ್ಮ ಜವಾಬ್ದಾರಿ ಎಂಬುದು ಇಲ್ಲವೇ ಎಂಬ ಚರ್ಚೆಗೆ ತೊಡಗಿ, ಇದುವರೆಗೆ ನಾವು ಕಂಡ ನಾಗರಿಕ ವ್ಯವಸ್ಥೆಯಲ್ಲಿ ಪ್ರಜಾಪ್ರಭುತ್ವವೇ ಅತ್ಯಂತ ಮಹತ್ವಾದುದು; ಅದಕ್ಕಿಂತಲೂ ಮಾನವೀಯವಾದದ್ದು ಮುಂದೆ ಸಿಗುವವರೆಗೆ ಅದನ್ನು ಜೋಪಾನ ಮಾಡಿಕೊಳ್ಳಬೇಕಾದ್ದು ಮನುಕುಲದ ಆದ್ಯತೆಯಾಗಿರಬೇಕು ಎಂಬ ಬಗ್ಗೆ ಬಹಳಷ್ಟು ಒಳನೋಟದ ಚಿಂತನೆಗಳನ್ನು ವಿಶ್ಲೇಷಿಸಿದ್ದರು. ವರ್ಷವುರುಳಿದಂತೆ ಅವರ ಕಣ್ಣಿನ ತೊಂದರೆ ಜಾಸ್ತಿಯಾಗುತ್ತಿತ್ತು. ಅದರ ಬಗ್ಗೆ ಹೇಳುತ್ತ, 'ಈಗೀಗ ಯಾರಾದರೂ ಪುಸ್ತಕ ಕಳುಹಿಸಿದರೆ ಓದಲು ಕಷ್ಟವಾಗ್ತಿದೆ. ಆದರೂ ಓದುವುದು ನನಗೆ ಖುಷಿಯೇ. ಪುಸ್ತಕ ಕಳಿಸಿ ಫೋನ್ ಮಾಡಿ ಏನಾದರೂ ಬರೀರಿ ಅಂತ ಒತ್ತಡ ಹೇರ್ತಾರೆ. ನಾಲ್ಕು ಮಾತು ಬರೆಯದಿದ್ದರೆ ಬೇಸರವಾಗುತ್ತದೆ. ಕೆಲವೊಮ್ಮೆ ಬರೆದರೂ ಬೇಸರವಾಗುತ್ತದೆ, ಅದು ಬೇರೆ' ಎಂದು ನಕ್ಕಿದ್ದರು. ಮುನ್ನುಡಿ-ಬೆನ್ನುಡಿ ಬಗ್ಗೆ ಬಹಳಷ್ಟು ಚರ್ಚೆ ಮಾಡುತ್ತಿದ್ದೆವು. ಊರಿನ ಬಗ್ಗೆ ವಿಷಾದಭರಿತ ಸೆಳೆತ, ವೈರಾಗ್ಯ ಎರಡನ್ನೂ ಏಕ ಕಾಲಕ್ಕೆ ಅವರು ಅನುಭವಿಸುತ್ತಿದ್ದರು.

2019ರಲ್ಲಿ ನನ್ನ ಕಾದಂಬರಿ ಬಂದಾಗ, 'ಕಾದಂಬರಿ ಬರಲಿ, ಕಥೆ ಆರದಿರಲಿ, ಬೇಕಾದಲ್ಲಿ ಲೇಖನಗಳೂ ಬರುತ್ತಿರಲಿ' ಎಂದು ಬರೆದಿದ್ದು ಮತ್ತೆ ಮತ್ತೆ ನೆನಪಾಗುತ್ತದೆ. ಕಳೆದುಕೊಂಡ ಮೇಲೆಯೇ ಮಹತ್ವ ಅರಿವಾಗುವುದಾ? ●